ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ Volume 160	ಮೈಸೂರು, ಶನಿವಾರ, ೦೪, ಅಕ್ಟೋಬರ್, ೨೦೨೫ (ಆಶ್ವಯುಜ, ೧೨, ಶಕವರ್ಷ, ೧೯೪೭) MYSURU, SATURDAY, 04, OCTOBER, 2025 (AASHWAYUJA , 12, SHAKAVARSHA, 1947)	ಸಂಚಿಕೆ ೩೯ Issue 39

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

☎ 08226-223761
08226-222831

Fax : 08226-223180
e-mail: dudcchamarajanagar@gmail.com

ಜಿಲ್ಲಾಧಿಕಾರಿಗಳ ಕಾರ್ಯಾಲಯ

(ಜಿಲ್ಲಾ ನಗರಾಭಿವೃದ್ಧಿ ಕೋಶ)
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂಖ್ಯೆ: ಚಾಜಿನಕೋ/ಕೊ.ಅ.ಮ/ಯೋಜನೆ/ಸಿಆರ್/02(1)/2019–20 **ದಿನಾಂಕ: 23.06.2023**

ಅಂತಿಮ ಅಧಿಸೂಚನೆ

1973 ರ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಅಧಿನಿಯಮ 3 ರ ಉಪನಿಯಮ (1) ರ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ : ವಇ 38 ಕೊಮಂಇ 2014 ದಿನಾಂಕ 04.06.2014 ಹಾಗೂ ನಂ : ವಇ 73 ಎಸ್‌ಬಿಎಂ 2001 ದಿನಾಂಕ : 26.06.2002 ರಲ್ಲಿ ಪ್ರತ್ಯಾ ಯೋಜಿಸಿರುವ ಅಧಿಕಾರದ ಮೇರೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಕೊಳಗೇರಿ ಅಭಿವೃದ್ಧಿ ಮಂಡಳಿ, ಆಯುಕ್ತರು, ಬೆಂಗಳೂರು. ಇವರ ಪತ್ರದ ಸಂಖ್ಯೆ: ಕಕೊಅಮ/ಕಂ–1/08/2021–22/318 ದಿನಾಂಕ 29.07.2021 ರಲ್ಲಿ ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಚಾಮರಾಜನಗರ ನಗರಸಭೆ ವ್ಯಾಪ್ತಿಯೊಳಗೆ ಬರುವ ಈ ಕೆಳಕಂಡ ಪ್ರದೇಶಗಳು ಕೊಳಚೆಯಿಂದ ಕೂಡಿದ್ದು ಮಾಲಿನ್ಯ ಹಾಗೂ ಅನಾರೋಗ್ಯ ವಾತಾವರಣದಿಂದ ಕೂಡಿರುತ್ತದೆ. ನಾಗರೀಕ ವಾಸಕ್ಕೆ ಅನುಕೂಲಕರವಾಗಿರುವುದಿಲ್ಲ. ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಆರೋಗ್ಯಕರವಾದ ಗಾಳಿ, ಬೆಳಕು, ರಸ್ತೆ, ಸೌಕರ್ಯ, ಒಳಚರಂಡಿ ವ್ಯವಸ್ಥೆ, ಶೌಚಾಲಯಗಳ ಸೌಕರ್ಯವಿರುವುದಿಲ್ಲ ಎಂಬುದು ಕಂಡು ಬಂದಿರುವುದರಿಂದ ಈ ಪ್ರದೇಶಗಳನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಉದ್ದೇಶಿಸಲಾಗಿ ಸದರಿ ಘೋಷಣೆಯ ಬಗ್ಗೆ ಯಾರಿಂದಾದರೂ ಹಾಗೂ ಸದರಿ ಪ್ರದೇಶದ ಜಮೀನಿನ ಬಾಬ್ತು ಹಿತಾಶಕ್ತಿಯುಳ್ಳ ಯಾವುದೇ ವ್ಯಕ್ತಿಗಳಿಂದ ಆಕ್ಷೇಪಣೆಗಳಿದ್ದಲ್ಲಿ ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 15 ದಿವಸಗಳ ಒಳಗಾಗಿ ಲಿಖಿತ ಮೂಲಕ ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಿ, ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿದ್ದಲ್ಲಿ ಯಾರಿಂದಲೂ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಭಾವಿಸಿ ಅಂತಿಮ ಘೋಷಣೆ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ದಿನಾಂಕ:05.09.2019 ರ ಕರ್ನಾಟಕ ರಾಜ್ಯ ಪತ್ರ ಭಾಗ–06 ಪುಟಸಂಖ್ಯೆ:552 ಪಿಆರ್155 ಎಸ್‌ಸಿ50 ರಲ್ಲಿ ಕರಡು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಗೇರಿ ಅಭಿವೃದ್ದಿ ಮಂಡಳಿ, ನಂ.2ನೇ ಉಪ ವಿಭಾಗ, ಮೈಸೂರು ರವರು ದಿನಾಂಕ:13.06.2023 ರ ಪತ್ರದಲ್ಲಿ ಕರಡು ಅಧಿಸೂಚಿತ ಕೊಳಚೆ ಪ್ರದೇಶಗಳಲ್ಲಿ ಅಧಿಸೂಚನೆಯನ್ನು ಪ್ರಚುರಪಡಿಸಿ ಇದುವರೆವಿಗೂ ಯಾವುದೇ ಆಕ್ಷೇಪಣೆ ಇರುವುದಿಲ್ಲ ಆದ್ದರಿಂದ ಸದರಿ ಕೊಳಚೆ ಪ್ರದೇಶಗಳಿಗೆ ಮಂಡಳಿಯಿಂದ ಮೂಲಭೂತ ಸೌಲಭ್ಯ ಒದಗಿಸಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸದರಿ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿ ಅಂತಿಮ ಅಧಿಸೂಚನೆ ಹೊರಡಿಸಲು ಕೋರಿರುತ್ತಾರೆ.

ಆದ್ದರಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಗೇರಿ ಅಭಿವೃದ್ದಿ ಮಂಡಳಿ, ನಂ.2ನೇ ಉಪ ವಿಭಾಗ, ಮೈಸೂರು ರವರ ವರದಿಯನ್ವಯ ಸದರಿ ಘೋಷಿತ ಕೊಳಚೆ ಪ್ರದೇಶಗಳಾದ ಈ ಕೆಳಗೆ ತಿಳಿಸಲಾದ ಚೆಕ್ಕುಬಂಧಿಯ ಪ್ರದೇಶಗಳನ್ನು ಅಂತಿಮವಾಗಿ ಕೊಳಚೆ ಪ್ರದೇಶಗಳೆಂದು ಘೋಷಿಸಿದೆ.

ಸಂಖ್ಯೆ: ಚಾಜಿನಕೋ/ಕೊ.ಅ.ಮ/ಯೋಜನೆ/ಸಆರ್/02(1)/2019–20 ದಿನಾಂಕ: 23.06.2023

ಕ್ರಮ ಸಂಖ್ಯೆ	ಪ್ರದೇಶ	ಮಾಲೀಕರು	ಸರ್ವೆ ನಂ.	ವಿಸ್ತೀರ್ಣ	ಚಿಕ್ಕುಬಂದಿ
1	ಜಾಲಹಳ್ಳಿ ಹುಂಡಿ	ಖಾಸಗಿ	–	12 ಎಕರೆ 20 ಗುಂಟೆ	ಪೂರ್ವ: ಸರ್ವೆ ನಂ.220 ಪಶ್ಚಿಮ : ಜಾಲಹಳ್ಳಿ ಹುಂಡಿ ಮುಖ್ಯ ರಸ್ತೆ ಉತ್ತರ : ದೊಡ್ಡಮೋಳೆ ರಸ್ತೆ ದಕ್ಷಿಣ : ಚನ್ನಿಪುರದ ಮೋಳೆ ರಸ್ತೆ
2	ಉಪ್ಪಾರಬೀದಿ (2ನೇ ಕ್ರಾಸ್)	ಖಾಸಗಿ	–	12 ಎಕರೆ 34 ಗುಂಟೆ	ಪೂರ್ವ: ನಾಯಕರ ಬೀದಿ ಪಶ್ಚಿಮ : ಟಿ ನರಸೀಪುರ ರಸ್ತೆ ಉತ್ತರ : ವಾರ್ಡ್ ನಂ.17 ದಕ್ಷಿಣ : ವಾರ್ಡ್ ನಂ.18
3	ಸೋಮವಾರಪೇಟೆ ಯಳವರ ಬೀದಿ	ಖಾಸಗಿ	–	03 ಎಕರೆ 04 ಗುಂಟೆ	ಪೂರ್ವ: ವಾರ್ಡ್ ನಂ.01 ರ ಗಡಿ ಪಶ್ಚಿಮ : ಎನ್ ಹೆಚ್ 209 ಉತ್ತರ : ವಾರ್ಡ್ ನಂ.01 ರ ಗಡಿ ದಕ್ಷಿಣ : ವಾರ್ಡ್ ನಂ.01 ರ ಗಡಿ
4	ಸೋಮವಾರಪೇಟೆ ಹರಿಜನ ಬೀದಿ	ಖಾಸಗಿ	–	9 ಎಕರೆ 29 ಗುಂಟೆ	ಪೂರ್ವಕ್ಕೆ : ಎನ್ ಹೆಚ್ 209 ಪಶ್ಚಿಮಕ್ಕೆ : ಆಶ್ರಯ ಬಡಾವಣೆ ಉತ್ತರಕ್ಕೆ : ಲಿಂಗಾಯಿತರ ಬೀದಿ ದಕ್ಷಿಣಕ್ಕೆ : ವಾರ್ಡ್ ನಂ.1 ರ ಗಡಿ
5	ಹೊಸ ಹರಿಜನರ ಬೀದಿ (ಮುಬಾರಕ್ ಮೊಹಲ್ಲಾ)	ಖಾಸಗಿ	–	2 ಎಕರೆ 29 ಗುಂಟೆ	ಪೂರ್ವಕ್ಕೆ : ರಾಜೇಂದ್ರ ಲೇಔಟ್ ಪಶ್ಚಿಮಕ್ಕೆ :ಕೆ.ಎಸ್.ಆರ್.ಟಿ.ಸಿ ಹಿಂಭಾಗದ ರಸ್ತೆ ಉತ್ತರಕ್ಕೆ : ಕೆ.ಪಿ ಮೊಹಲ್ಲಾ ದಕ್ಷಿಣಕ್ಕೆ : ಕೆ.ಎನ್ ಮೊಹಲ್ಲಾ ರಸ್ತೆ
6	ಕೆ.ಎಸ್.ಆರ್.ಟಿ.ಸಿ ಹಿಂಭಾಗ	ಖಾಸಗಿ	–	4 ಎಕರೆ 30 ಗುಂಟೆ	ಪೂರ್ವಕ್ಕೆ : ಮುಬಾರಕ್ ಮೊಹಲ್ಲಾ ಪಶ್ಚಿಮಕ್ಕೆ :ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಉತ್ತರಕ್ಕೆ : ಕೆ.ಪಿ ಮೊಹಲ್ಲಾ ದಕ್ಷಿಣಕ್ಕೆ : ಕೆ.ಎನ್ ಮೊಹಲ್ಲಾ ರಸ್ತೆ

ಜಿಲ್ಲಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

PR-187

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

☎ 08226-223761
08226-222831

Fax : 08226-223180
e-mail: dudcchamarajanagar@gmail.com

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂಖ್ಯೆ: ಚಾಜಿನಕೋ/ಕೊ.ಅ.ಮ/ಯೋಜನೆ/ಪಿಆರ್/02(1)/2019–20 ದಿನಾಂಕ: 23.06.2023

ಅಂತಿಮ ಅಧಿಸೂಚನೆ

1973 ರ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಅಧಿನಿಯಮ 3 ರ ಉಪನಿಯಮ (1) ರ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ : ವಇ 38 ಕೊಮಂಇ 2014 ದಿನಾಂಕ 04.06.2014 ಹಾಗೂ ನಂ : ವಇ 73 ಎಸ್‌ಬಿಎಂ 2001 ದಿನಾಂಕ : 26.06.2002 ರಲ್ಲಿ ಪ್ರತ್ಯಾ ಯೋಜಿಸಿರುವ ಅಧಿಕಾರದ ಮೇರೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೊಷಿಸಲು ಕೊಳಗೇರಿ ಅಭಿವೃದ್ಧಿ ಮಂಡಳಿ, ಆಯುಕ್ತರು, ಬೆಂಗಳೂರು. ಇವರ ಪತ್ರದ ಸಂಖ್ಯೆ: ಕಕೊಅಮ/ಕಂ–1/23/2019–20 ದಿನಾಂಕ:02.08.2019 ರಲ್ಲಿ ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯೊಳಗೆ ಬರುವ ಹಳ್ಳದಕೇರಿ ಬಡಾವಣೆಯ ಪ್ರದೇಶವು ಕೊಳಚೆಯಿಂದ ಕೂಡಿದ್ದು ಮಾಲಿನ್ಯ ಹಾಗೂ ಅನಾರೋಗ್ಯ ವಾತಾವರಣದಿಂದ ಕೂಡಿರುತ್ತದೆ. ನಾಗರೀಕ ವಾಸಕ್ಕೆ ಅನುಕೂಲಕರವಾಗಿರುವುದಿಲ್ಲ. ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಆರೋಗ್ಯಕರವಾದ ಗಾಳಿ, ಬೆಳಕು, ರಸ್ತೆ, ಸೌಕರ್ಯ, ಒಳಚರಂಡಿ ವ್ಯವಸ್ಥೆ, ಶೌಚಾಲಯಗಳ ಸೌಕರ್ಯವಿರುವುದಿಲ್ಲ ಎಂಬುದು ಕಂಡು ಬಂದಿರುವುದರಿಂದ ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಉದ್ದೇಶಿಸಲಾಗಿ ಸದರಿ ಘೋಷಣೆಯ ಬಗ್ಗೆ ಯಾರಿಂದಾದರೂ ಹಾಗೂ ಸದರಿ ಪ್ರದೇಶದ ಜಮೀನಿನ ಬಾಬ್ತು ಹಿತಾಶಕ್ತಿಯುಳ್ಳ ಯಾವುದೇ ವ್ಯಕ್ತಿಗಳಿಂದ ಆಕ್ಷೇಪಣೆಗಳಿದ್ದಲ್ಲಿ ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 15 ದಿವಸಗಳ ಒಳಗಾಗಿ ಲಿಖಿತ ಮೂಲಕ ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಿ ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿದ್ದಲ್ಲಿ ಯಾರಿಂದಲೂ ಯಾವುದೇ ಆಕ್ಷೇಪಣೆಗಳಿಲ್ಲವೆಂದು ಭಾವಿಸಿ ಅಂತಿಮ ಘೋಷಣೆ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ದಿನಾಂಕ:05.09.2019 ರ ಕರ್ನಾಟಕ ರಾಜ್ಯ ಪತ್ರ ಭಾಗ–06 ಪುಟಸಂಖ್ಯೆ:551 ಪಿಆರ್154 ಎಸ್‌ಸಿ50 ರಲ್ಲಿ ಕರಡು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.2ನೇ ಉಪ ವಿಭಾಗ, ಮೈಸೂರು ರವರು ದಿನಾಂಕ:13.06.2023 ರ ಕರಡು ಅಧಿಸೂಚಿತ ಹಳ್ಳದಕೇರಿ ಕೊಳಚೆ ಪ್ರದೇಶದಲ್ಲಿ ಸದರಿ ಅಧಿಸೂಚನೆಯನ್ನು ಪ್ರಚುರಪಡಿಸಿ ಇದುವರೆವಿಗೂ ಯಾವುದೇ ಆಕ್ಷೇಪಣೆ ಇರುವುದಿಲ್ಲ, ಆದ್ದರಿಂದ ಸದರಿ ಹಳ್ಳದಕೇರಿ ಬಡಾವಣೆಗೆ ಮಂಡಳಿಯಿಂದ ಮೂಲಭೂತ ಸೌಲಭ್ಯ ಒದಗಿಸಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಅಂತಿಮ ಅಧಿಸೂಚನೆ ಹೊರಡಿಸಲು ಕೋರಿರುತ್ತಾರೆ.

ಆದ್ದರಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.2ನೇ ಉಪ ವಿಭಾಗ, ಮೈಸೂರು ರವರ ವರದಿಯನ್ವಯ ಸದರಿ ಘೋಷಿತ ಕೊಳಚೆ ಪ್ರದೇಶ ಹಳ್ಳದಕೇರಿ ಬಡಾವಣೆಯ ಈ ಕೆಳಗೆ ತಿಳಿಸಲಾದ ಚೆಕ್ಕುಬಂಧಿಯ ಪ್ರದೇಶವನ್ನು ಅಂತಿಮವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿದೆ.

ಸಂಖ್ಯೆ: ಚಾಜಿನಕೋ/ಕೊ.ಅ.ಮ/ಯೋಜನೆ/ಪಿಆರ್/02(1)/2019–20 ದಿನಾಂಕ: 23.06.2023

ಕ್ರಮ ಸಂಖ್ಯೆ	ಪ್ರದೇಶ	ಮಾಲೀಕರು	ಸರ್ವೆ ನಂ.	ವಿಸ್ತೀರ್ಣ	ಚಿಕ್ಕುಬಂದಿ
1	ಗುಂಡ್ಲುಪೇಟೆ ಹಳ್ಳದಕೇರಿ	ಖಾಸಗಿ: ಸರ್ಕಾರಿ	199	04 ಎಕರೆ 30 ಗುಂಟೆ	ಪೂರ್ವಕ್ಕೆ: ಎಸ್ ಆರ್ ರಸ್ತೆ ಪಶ್ಚಿಮಕ್ಕೆ : ಸರ್ವೇ ನಂ.199 ಉತ್ತರಕ್ಕೆ : ಸಮುದಾಯ ಭವನ ದಕ್ಷಿಣಕ್ಕೆ : ಕೆ.ಆರ್.ಸಿ ರೋಡ್

ಜಿಲ್ಲಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

PR-188

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA